**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.</u>**

**<u>ಸಿ.ಸಿ. ಸಂಖ್ಯೆ:59/2015</u>**

| | |
|---|---|
| ಫ್ರಾಸಾ | 16 |
| ಚಾಸಾ | 16 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 08.01.2026.**

| | | |
|---|---|---|
| ಸಾಕ್ಷಿಯ ಹೆಸರು | : | ನರೇಶ್ |
| ತಂದೆಯ/ಗಂಡನ ಹೆಸರು | : | ನಾಗರಾಜ್ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಕೃಷಿ |
| ವಾಸಸ್ಥಳ | : | ಸಂಜೀವರಾಯನ ಹಳ್ಳಿ |

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**<u>ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ</u>**

ಈ ಹಂತದಲ್ಲಿ ಸಾಕ್ಷಿಗೆ ನಿಪಿ-10 ರಂತೆ ಶವ ತನಿಖಾ ವರದಿ ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದರು. ಸದರಿ ಸಹಿಯನ್ನು ದಿನಾಂಕ 24.11.2017 ರಂದು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯ ಬಳಿ ರಾತ್ರಿ 2.30 ಸಮಯದಲ್ಲಿ ಮೃತ ನಟರಾಜ್ ರವರ ಮರಣೋತ್ತರ ಪರೀಕ್ಷೆಯ ವೇಳೆ ಮಾಡಿರುವುದಾಗಿ ನುಡಿಯುತ್ತಾರೆ. ನನ್ನ ಜೊತೆ ಚಾಸಾ-15,17 ಮತ್ತು ಚಾಸಾ21 ರವರು ಸಹಿ ಮಾಡಿದರು ಎಂದು ನುಡಿಯುತ್ತಾರೆ.

ನಟರಾಜ್ ರವರಿಗೆ ಚಿತ್ರಾವತಿಯ ಬಳಿ ದಿನಾಂಕ 05.02.2014 ರಂದು ಅಪಘಾತವಾಗಿತ್ತು ಎಂದು ನುಡಿಯುತ್ತಾರೆ. ಅಪಘಾತದಿಂದ ನಟರಾಜ್ ರವರ ತಲೆಗೆ ಗಾಯವಾಗಿತ್ತು ಎಂದು ನುಡಿಯುತ್ತಾರೆ. ನಟರಾಜ್ ರವರಿಗೆ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ನಂತರ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ನಟರಾಜ್ ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ 6 ತಿಂಗಳುಗಳ ಕಾಲ ಕೋಮದಲ್ಲಿ ಇದ್ದರು. ಆ ನಂತರ ಅವರನ್ನು ಮನೆಗೆ ಕರೆದುಕೊಂಡು ಬಂದಿದ್ದರು. ಆತನನ್ನು ಆಗಾಗ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನಂತರ ನಟರಾಜ್ ರವರು ಮನೆಯಲ್ಲಿ ಮೃತರಾದರು. ನಂತರ ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಲಾಯಿತು ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>**

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ನಟರಾಜ್ ರವರು ಮೃತರಾದರು ಎಂದರೆ ಸರಿ. ನಟರಾಜ್ ರವರು ಅಪಘಾತ ಸಂಭವಿಸಿದ ಮೂರು ವರ್ಷದ ನಂತರ ಮೃತರಾದರು ಎಂದರೆ ಸರಿ.

**<u>ಪಾಟೀ ಸವಾಲು : ಶ್ರೀ ಕೆ.ಎಸ್. ಆರ್. ವಕೀಲರಿಂದ, ಆರೋಪಿ ಪರವಾಗಿಃ</u>**

ನನ್ನನ್ನು ಚಾಸಾ-15, 17 ಮತ್ತು ಚಾಸಾ-21 ರವರು ಮರಣೋತ್ತರ ಪರೀಕ್ಷೆಗೆ ಕರೆದಿದ್ದರು. ನಾನು ಆಸ್ಪತ್ರೆಯ ಬಳಿ ಇದ್ದಾಗ ಕರೆದಿದ್ದರು. ಅಪಘಾತ ಸಂಭವಿಸಿದ ನಂತರ

ನಟರಾಜ್ ರವರಿಗೆ ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದ ನಂತರ ನಟರಾಜ್ ರವರು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ಮೃತ ನಟರಾಜ್ ನಮ್ಮ ಗ್ರಾಮದವರು.

ಪಂಚನಾಮೆಯನ್ನು ಯಾವ ಸಮಯದವರೆಗೆ ನಡೆಸಿದ್ದರು ಎಂದರೆ ನಾನು ರಾತ್ರಿ 2.30 ಸಮಯದಲ್ಲಿ ಸಹಿ ಮಾಡಿ ವಾಪಸ್ಸು ಬಂದೆ ಎಂದು ನುಡಿಯುತ್ತಾರೆ. ಆಗ ಸುಮಾರು 25 ಜನ ಸೇರಿದ್ದರು. ಸದರಿ ಪತ್ರಕ್ಕೆ ಮೂರು–ನಾಲ್ಕು ಜನ ಸಹಿ ಮಾಡಿದ್ದಾರೆ. ಚಾಸಾ–17 ರವರು ಪಂಚನಾಮೆಗೆ ಸಹಿ ಮಾಡಲು ತಿಳಿಸಿದ್ದರು.

ನಾನು ಆಸ್ಪತ್ರೆಗೆ ಹೋಗಿಲ್ಲ, ಬದಲಾಗಿ ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಟರಾಜ್ ರವರು 2017 ರಲ್ಲಿ ಬೆಂಗಳೂರಿನಲ್ಲಿ ಮೃತರಾದರು. ದಿನಾಂಕ 24.11.2017 ರಂದು ನಟರಾಜ್ ಮೃತರಾದರು ಎಂದು ನಮ್ಮ ರಕ್ತ ಸಂಬಂಧಿಗಳು ರಾತ್ರಿ 7 ಗಂಟೆಗೆ ವಿಚಾರ ತಿಳಿಸಿದರು. ನಟರಾಜ್ ರವರಿಗೆ ಅಪಘಾತವಾಗಿದೆ ಎಂದು ನಮ್ಮ ಅಕ್ಕ ಕರೆ ಮಾಡಿ ತಿಳಿಸಿದ್ದರು. ಆ ನಂತರ ನಾನು ಮತ್ತು ನನ್ನ ಅಣ್ಣನಾದ ಚಾಸಾ–17 ರವರು ಅಪಘಾತ ಸ್ಥಳಕ್ಕೆ ರಾತ್ರಿ 8 ಗಂಟೆಗೆ ಹೋಗಿದ್ದೆವು. ನಂತರ ನಟರಾಜ್ ರವರನ್ನು ಆಟೋ ಮೂಲಕ ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಆಟೋದಲ್ಲಿ ಚಾಸಾ–15, 17 ಮತ್ತು ಚಾಸಾ–21 ರವರು ಮತ್ತು ನಾನು ಬಂದೆವು ಎಂದು ನುಡಿಯುತ್ತಾರೆ. ಅಪಘಾತ ಸ್ಥಳಕ್ಕೆ ಪೊಲೀಸರು ಬಂದಿರಲಿಲ್ಲ. ಬಾಗೇಪಲ್ಲಿ ಆಸ್ಪತ್ರೆಗೆ ಬಂದಿರಲಿಲ್ಲ. ನಂತರ ನಟರಾಜ್ ರವರನ್ನು ಆಂಬುಲೆನ್ಸ್ ಮೂಲಕ ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಂಬುಲೆನ್ಸ್ ನಲ್ಲಿ ಚಾಸಾ–17, 18, 21 ಮತ್ತು ನಾನು ಹೋಗಿದ್ದೆವು ಎಂದು ನುಡಿಯುತ್ತಾರೆ. ನಟರಾಜ್ ರವರು ಸುಮಾರು 6 ತಿಂಗಳುಗಳ ಕಾಲ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ.

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ನಟರಾಜ್ ರವರು 6 ತಿಂಗಳುಗಳ ಕಾಲ ಇರಲಿಲ್ಲ ಎಂದರೆ ಸರಿಯಲ್ಲ. ನಟರಾಜ್ ರವರ ಹೆಂಡತಿ ಚಿಕ್ಕಬಳ್ಳಾಪುರದ ನ್ಯಾಯಾಲಯದಲ್ಲಿ ಅಪಘಾತ ವಿಮೆ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಆ ಪ್ರಕರಣಕ್ಕೆ ಅನುಕೂಲವಾಗಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.